C.R.P.67

Form No.4 (Civil)
Deposition Sheets
(R.P.No.57)

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.121/2021 ಸಿ. ಡಬ್ಲ್ಯೂ-31 ಪಿ. ಡಬ್ಲ್ಯೂ-24

ದಿನಾಂಕಃ- 10.12.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಕೆ. ಜವರಯ್ಯ |
| ತಂದೆಯ ಹೆಸರು | ಲೇಟ್ ಕರಗಯ್ಯ |
| ವಯಸ್ಸು | 57 ವರ್ಷ |
| ಉದ್ಯೋಗ | ಹಿರಿಯ ಮೋಟಾರು ವಾಹನ ನಿರೀಕ್ಷಕರು, ಪ್ರಾದೇಶಿಕ ಸಾರಿಗೆ ಕಛೇರಿ, ಬೀದರ್ |
| ವಾಸ | ಬೀದರ್ |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. 2018 ನೇ ಇಸವಿ ಸೆಪ್ಟಂಬರ್ ತಿಂಗಳಿನಿಂದ 2023 ನೇ ಇಸವಿ ಮಾರ್ಚ ತಿಂಗಳವರೆಗೆ ನಾನು ಮಂಡ್ಯದ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 27.05.2021 ರಂದು ಮದ್ದೂರು ವೃತ್ತದ ಪೊಲೀಸ್ ವೃತ್ತ ನಿರೀಕ್ಷಕರು ನಮ್ಮ ಇಲಾಖೆಗೆ ಒಂದು ಮನವಿಯನ್ನು ಸಲ್ಲಿಸಿದ್ದರು.

3. ಸದರಿ ಮನವಿಯನ್ನು ನಮ್ಮ ಇಲಾಖೆಯವರು ಸ್ವೀಕರಿಸಿದ್ದಾರೆ.

4. ಈಗ ನನಗೆ ತೋರಿಸಿದ ದಾಖಲೆಯು ಸದರಿ ಮನವಿ ಪತ್ರ ಆಗಿದೆ. ಸದರಿ ಮನವಿ ಪತ್ರದಲ್ಲಿ ನಮ್ಮ ಇಲಾಖೆಯ ಮೊಹರು ಇದೆ. ಸದರಿ ದಾಖಲೆಯನ್ನು ನಿಪಿ.86 ಎಂದು ಗುರುತಿಸಿದೆ. KA-11-EJ-9688 ಸಂಖ್ಯೆಯ ಮೋಟಾರು ಸೈಕಲ್ಲನ್ನು ಮತ್ತು KA-05-ME-5094 ಸಂಖ್ಯೆಯ ಒಂದು ಕಾರನ್ನು ಒಂದು ಅಪರಾಧದ

ಸಂಬಂಧವಾಗಿ ಅಂದರೆ Cr.141/2021 ಎಂಬುದಾಗಿ ಮದ್ದೂರು ಪೊಲೀಸ್ ಠಾಣೆಯಲ್ಲಿ ನೋಂದಣಿಯಾಗಿರುವ ಪ್ರಕರಣದ ಸಂಬಂಧವಾಗಿ ವಶಪಡಿಸಿಕೊಳ್ಳಲಾಗಿದೆ ಮತ್ತು ಆ ವಾಹನಗಳನ್ನು ತಪಾಸಣೆ ಮಾಡಿ ವರದಿ ನೀಡಬೇಕು ಎಂಬುದಾಗಿ ಸದರಿ ಮನವಿ ಪತ್ರದ ಮೂಲಕ ಪೊಲೀಸ್ ವೃತ್ತ ನಿರೀಕ್ಷಕರು ನಮ್ಮನ್ನು ಕೇಳಿಕೊಂಡಿದ್ದರು.

5. ನಂತರ ದಿಃ 27.05.2021 ರಂದು ನಾನು ಮದ್ದೂರಿನ ಪೊಲೀಸ್ ಠಾಣೆಗೆ ಭೇಟಿ ಕೊಟ್ಟೆನು. ಮದ್ದೂರು ಪೊಲೀಸ್ ಠಾಣೆಯ ಆವರಣದಲ್ಲಿ ಮೇಲೆ ಹೇಳಿದ 2 ವಾಹನಗಳು ಇದ್ದವು.

6. ಪ್ರಥಮವಾಗಿ KA-11-EJ-9688 ಸಂಖ್ಯೆಯ ಮೋಟಾರು ಸೈಕಲ್ಲನ್ನು ನಾನು ತಪಾಸಣೆ ಮಾಡಿದೆನು. ಸದರಿ ವಾಹನದಲ್ಲಿ ಈ ಕೆಳಕಂಡಂತಹ ಜಖಂಗಳು ಕಂಡು ಬಂದಿರುತ್ತವೆ.

a) Front left indicator, left crash guard damaged
b) Rear right indicator damaged
c) Silencer pipe damaged
d) Head light mask right and left side scratched

7. Note- ನಿಪಿ.87 ರಲ್ಲಿ ಯಾವ ರೀತಿ ಆಂಗ್ಲ ಭಾಷೆಯಲ್ಲಿ ಬರೆಯಲಾಗಿದೆಯೋ ಅದನ್ನು ಯಥಾವತ್ತಾಗಿ ಈ ಸಾಕ್ಷಿಯ ವಿಚಾರಣೆಯಲ್ಲಿ ನಮೂದು ಮಾಡಿಕೊಳ್ಳಲಾಗಿದೆ.

8. ಸದರಿ ದ್ವಿಚಕ್ರ ವಾಹನವನ್ನು ನಾನು ಚಾಲನೆ ಮಾಡಿ ನೋಡಿದೆನು ಮತ್ತು ಆ ವಾಹನವು ಯಾಂತ್ರಿಕವಾಗಿ ಸುಸ್ಥಿತಿಯಲ್ಲಿ ಇತ್ತು ಮತ್ತು ಅದು ಚಾಲನಾ ಸ್ಥಿತಿಯಲ್ಲಿ ಇತ್ತು.

9. ನಂತರ KA-05-ME-5094 ಸಂಖ್ಯೆಯ ಮಾರುತಿ ಕಾರನ್ನು ನಾನು ತಪಾಸಣೆಗೆ ಒಳಪಡಿಸಿದ್ದೇನೆ. ತಪಾಸಣಾ ಕಾಲದಲ್ಲಿ ಸದರಿ ವಾಹನದಲ್ಲಿ ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತವೆ.

a) Front left tyre completely worn out and threads comes out.

b) Front left head light damaged

c) Front left bumper and foglamp damaged.

d) Front left side wheel fender dented and scratched

e) Front left rear view mirror damaged

10. Note- ನಿಪಿ.87 ರಲ್ಲಿ ಯಾವ ರೀತಿ ಆಂಗ್ಲ ಭಾಷೆಯಲ್ಲಿ ಬರೆಯಲಾಗಿದೆಯೋ ಅದನ್ನು ಯಥಾವತ್ತಾಗಿ ಈ ಸಾಕ್ಷಿಯ ವಿಚಾರಣೆಯಲ್ಲಿ ನಮೂದು ಮಾಡಿಕೊಳ್ಳಲಾಗಿದೆ.

11. ಸದರಿ ಕಾರನ್ನು ತಪಾಸಣೆ ಮಾಡಿದಾಗ ಆ ವಾಹನವು ಚಾಲನಾ ಸ್ಥಿತಿಯಲ್ಲಿ ಇರಲಿಲ್ಲ.

12. ಸದರಿ ವಾಹನಗಳನ್ನು ತಪಾಸಣೆ ಮಾಡಿರುವ ಸಂಬಂಧವಾಗಿ ನಾನು ಒಂದು ವರದಿಯನ್ನು ಅದೇ ದಿನ ಅಂದರೆ ದಿಃ 27.05.2021 ರಂದು ನೀಡಿದ್ದೇನೆ.

13. ಈಗ ನನಗೆ ತೋರಿಸಿದ ಪರಿಶೀಲನಾ ವರದಿಯು ನಾನು ನೀಡಿರುವ ವರದಿ ಆಗಿದೆ ಮತ್ತು ಸದರಿ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ.87 ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ.87(ಎ) ಎಂದು ಗುರುತಿಸಿದೆ.

14. ಮೇಲೆ ಹೇಳಿದ ಜಖಂಗಳು ಆಗಿದ್ದ ಕಾರಣದಿಂದ ಮತ್ತು ಆ ಕಾರಿನ ಎಡಗಡೆಯ ಟೈರು ಸಂಪೂರ್ಣವಾಗಿ ದುಸ್ಥಿತಿಯಲ್ಲಿ ಇದ್ದ ಕಾರಣದಿಂದ ಆ ಕಾರನ್ನು ಚಾಲನೆ ಮಾಡಲು ಆಗುತ್ತಾ ಇರಲಿಲ್ಲ.

15. ಎರಡು ವಾಹನಗಳು ಪರಸ್ಪರ ಡಿಕ್ಕಿ ಹೊಡೆದರೆ ಅಥವಾ ವಾಹನಗಳು ಮರಕ್ಕೆ ಅಥವಾ ಗೋಡೆಗೆ ಅಥವಾ ಒರಟಾದ ಮತ್ತು ಗಟ್ಟಿಯಾದ ವಸ್ತುವಿಗೆ ಅಥವಾ ಬೆಟ್ಟಗುಡ್ಡಗಳಿಗೆ ಗುದ್ದಿದಾಗ ಸದರಿ ವಾಹನಗಳಲ್ಲಿ ಆಗಿದ್ದಂತಹ damage ಗಳು ಆಗುವ ಸಾಧ್ಯತೆ ಇರುತ್ತದೆ.

16. ಒಬ್ಬ ವ್ಯಕ್ತಿಯು ವಾಹನವನ್ನು ಚಾಲನೆ ಮಾಡುವಾಗ ಆಯತಪ್ಪಿ ಬಿದ್ದಾಗ ಆ ದ್ವಿಚಕ್ರ ವಾಹನದಲ್ಲಿ ಇದ್ದಂತಹ damages ಗಳು ಆಗುವ ಸಂಭವ ಇದೆ.

17. ನಿಪಿ.11 ಮತ್ತು ನಿಪಿ.12 ಎಂದು ಗುರುತು ಆಗಿರುವ ಫೋಟೋಗಳಲ್ಲಿ ಮೇಲೆ ಹೇಳಿದ ದ್ವಿಚಕ್ರ ವಾಹನವು ಕಾಣಿಸುತ್ತಾ ಇದೆ. ನಿಪಿ.38 ಎಂದು ಗುರುತು ಆಗಿರುವ ಫೋಟೋದಲ್ಲಿ ಮೇಲೆ ಹೇಳಿದ KA-05-ME-5094 ಸಂಖ್ಯೆಯ ಕಾರಿನ ಚಿತ್ರವು ಕಾಣಿಸುತ್ತಾ ಇದೆ.

ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಬಿ ಆರ್ ವಿ ವಕೀಲರಿಂದಃ-

18. ದಿಃ 27.05.2021 ರಂದೇ ಮದ್ದೂರು ಪೊಲೀಸ್ ಠಾಣೆಯವರು ನಮಗೆ ಮನವಿ ಪತ್ರವನ್ನು ಅಂದರೆ ನಿಪಿ.86 ದಾಖಲೆಯನ್ನು ನೀಡಿದ್ದಾರೆ.

19. ಯಾವುದೇ ಒಂದು ವಾಹನವನ್ನು ತಪಾಸಣೆ ಮಾಡುವಂತಹ ಸಮಯದಲ್ಲಿ ನಾವು ಮೋಟಾರು ವಾಹನ ಕಾಯ್ದೆಯ ಕಲಂ 136 ರ ರೀತಿ ಪರೀಕ್ಷೆಗಳನ್ನು ಮಾಡಬೇಕು ಎಂದರೆ ನಿರ್ದಿಷ್ಟವಾಗಿ Section ಹೇಳಲು ಸಾಧ್ಯವಿಲ್ಲ, ಆದರೆ ಮೋಟಾರು ವಾಹನ ಕಾಯ್ದೆಯಲ್ಲಿ ಇರುವ ರೀತಿಯಲ್ಲಿ ತಪಾಸಣೆ ಮಾಡಬೇಕು.

20. ಯಾವುದೇ ವಾಹನವನ್ನು ನಾವು ತಪಾಸಣೆಗೆ ಒಳಪಡಿಸಿದಾಗ ನಿರ್ದಿಷ್ಟವಾದ ನಮೂನೆಯಲ್ಲಿಯೇ (prescribed format) ಆ ವರದಿಯನ್ನು ನೀಡಬೇಕು ಎಂದರೆ ಅಪಘಾತದ ಪ್ರಕರಣಗಳಲ್ಲಿ ಮಾತ್ರ ನಿರ್ದಿಷ್ಟ ನಮೂನೆಯಲ್ಲಿ ನಾವು ವರದಿಯನ್ನು ಕೊಡುತ್ತೇವೆ, ಇತರೆ ಪ್ರಕರಣಗಳಲ್ಲಿ ಒಂದು ಬಿಳಿಯ ಹಾಳೆಯ ಮೇಲೆ ಪರಿಶೀಲನಾ ವರದಿಯನ್ನು ತಯಾರು ಮಾಡಿ ಕೊಡುತ್ತೇವೆ.

21. ಒಂದು ವಾಹನವನ್ನು ತಪಾಸಣೆಗೆ ಒಳಪಡಿಸುವ ಮೊದಲು ಆ ವಾಹನದ ಮಾಲೀಕರಿಗೆ ತಿಳುವಳಿಕೆ ಪತ್ರ (notice) ಕೊಡಬೇಕು ಎಂದರೆ ಆ ಕೆಲಸವನ್ನು ಪೊಲೀಸರು ಮಾಡುತ್ತಾರೆ, ನಾವು ಯಾವುದೇ notice ಅನ್ನು ಕೊಡುವುದಿಲ್ಲ. ಮೇಲೆ ಹೇಳಿದ ವಾಹನಗಳ ಮಾಲೀಕರಿಗೆ ನಾನು ಯಾವುದೇ notice ಅನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ.

22. ಮೇಲೆ ಹೇಳಿದ ವಾಹನಗಳ ತಪಾಸಣೆಯನ್ನು ಸದರಿ ವಾಹನಗಳ RC ಮಾಲೀಕರ ಸಮಕ್ಷಮದಲ್ಲಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಸದರಿ ವಾಹನಗಳನ್ನು

ತಪಾಸಣೆ ಮಾಡುವಂತಹ ಸಮಯದಲ್ಲಿ ಆ ವಾಹನಗಳ ಫೋಟೋಗಳನ್ನು ನಾನು ತೆಗೆದಿರುವುದಿಲ್ಲ ಎಂದರೆ ಅದರ ಅವಶ್ಯಕತೆ ನನಗೆ ಇರುವುದಿಲ್ಲ.

23. ಮೇಲೆ ಹೇಳಿದ ದ್ವಿಚಕ್ರ ವಾಹನದ ಕ್ಲಚ್ಚು, ಬ್ರೇಕು ಮತ್ತು ಹ್ಯಾಂಡಲ್ ಗಳಲ್ಲಿ ಯಾವುದೇ damages ಆಗಿರಲಿಲ್ಲ. ನಾನು ತಪಾಸಣೆ ಮಾಡಿದಾಗ ಮೇಲೆ ಹೇಳಿದ ಕಾರಿನ front left head light ಒಡೆದು ಹೋಗಿತ್ತು. ಆದರೆ ಆ ಕಾರಿನ front left head light ಬಳಿ ಗಾಜಿನ ಅವಶೇಷಗಳು ಇದ್ದವೋ ಇಲ್ಲವೋ ಎಂದು ಹೇಳಲು ನೆನಪಿಲ್ಲ. ಸದರಿ ಕಾರಿನ ಮುಂಭಾಗದ ಎಡಭಾಗದ foglight ಒಡೆದು ಹೋಗಿತ್ತು.

24. ನಾನು ಹೇಳಿದ ಹಾಗೆ ನಾನು ಯಾವುದೇ ವಾಹನಗಳ ತಪಾಸಣೆಯನ್ನು ಮಾಡಿರುವುದಿಲ್ಲ ಮತ್ತು ಕೇವಲ ತನಿಖಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ ನಾನು ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

ಏನೂ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.